ಅಭ್ಯರ್ಥಿಗಳ ಹೆಸರು, ವಿಳಾಸ, ಜಾತಿ ಮತ್ತು ವಿದ್ಯಾರ್ಹತೆಗಳ ವಿವರಗಳನ್ನು ನಂತರ ಒದಗಿಸಲಾಗುವುದು.

ಆ) ವಿವರ ಪಡೆದು ಒದಗಿಸಲಾಗುವುದು.

ಇ) ನೇಮಕಾತಿ ಪ್ರಕಟಿಸಿದ ಪಟ್ಟಿಯಲ್ಲಿ ಇದ್ದ ಏಕೋಪಾಧ್ಯಾಯ ಶಾಲೆಗಳನ್ನು ಹೊರತು ಪಡಿಸಿ ಬೇರೆ ಶಾಲೆಗಳಿಗೆ ನೇಮಕಾತಿ ಆದೇಶ ನೀಡಲು ಬಾರದ ಕಾರಣ ಅದರಲ್ಲಿ ತೋರಿಸಿದ ಏಕೋಪಾಧ್ಯಾಯ ಶಾಲೆಗಳಿಗೆ ಮಾತ್ರ ನೇಮಕಾತಿ ಆದೇಶ ನೀಡಿದೆ.

ಬೆಳಗಾಂ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

(2036): ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ತುಂಬಲು ಸರ್ಕಾರ ಕೈಕೊಳ್ಳಲುದ್ದೇಶಿಸಿರುವ ಕ್ರಮಗಳೇನು ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಖಾಲಿಯಿರುವ 859 ಹುದ್ದೆಗಳ ಪೈಕಿ, 582 ಹುದ್ದೆಗಳನ್ನು ಸಾಮಾನ್ಯ ನೇಮಕಾತಿ ಮತ್ತು ವಿಶೇಷ ನೇಮಕಾತಿ ನಿಯಮಗಳನ್ವಯ ತುಂಬಲು ಕ್ರಮ ಜರುಗಿಸಲಾಗುತ್ತಿದೆ.

ಅಧ್ಯಕ್ಷರು:– ಇಲ್ಲಿಗೆ ಪ್ರಶ್ನೋತ್ತರಗಳು ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸುವುದು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ದಿನಾಂಕ: 17-3-1993ರ ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ 62 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ: 2135, 1704, 1584, 1941, 13, 824, 1937, 1942, 1981, 2119, ಮತ್ತು 2122 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 51 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೀನುಗಾರರಿಗೆ ಉಚಿತ ಮನೆ

(2063): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೀನುಗಾರರಿಗೆ ಉಚಿತವಾಗಿ ಮನೆ ಕಟ್ಟಿಸಿಕೊಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;

ಆ) ಇದಕ್ಕೆ ಪ್ರತಿ ವರ್ಷ ಎಷ್ಟು ಹಣವನ್ನು ಒದಗಿಸಲಾಗುತ್ತಿದೆ. ಈ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಇ) ಎಷ್ಟು ಮನೆ ಕಟ್ಟಲಾಗಿದೆ;

ಈ) ಈ ವರ್ಷ ಯಾವಾಗ ಮನೆಗಳನ್ನು ಕಟ್ಟಲು ಪ್ರಾರಂಭಿಸಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):–

ಅ) ಹೌದು.

ಆ) ಇದಕ್ಕಾಗಿ 1991–92ರಲ್ಲಿ ರೂ. 20.00ಲಕ್ಷಗಳನ್ನು, 1992–93ರ ಸಾಲಿನಲ್ಲಿ ರೂ. 50.00 ಲಕ್ಷಗಳನ್ನು ಒದಗಿಸಲಾಗಿದ್ದು, 1993–94ರ ಸಾಲಿಗೆ 100.00 ಲಕ್ಷ ರೂ.ಗಳನ್ನು ಒದಗಿಸಿದೆ. 1992-93 ರಲ್ಲಿ ಇದುವರೆಗೆ ರೂ. ೪.೦೦ ಲಕ್ಷ ಇದುವರೆಗೆ ಬಿಡುಗಡೆ ಮಾಡಲಾಗಿದೆ. ಉಳಿದ ಹಣ ಬಿಡುಗಡೆ ಹಂತದಲ್ಲಿದೆ.

ಇ) ಇದುವರೆಗೆ ಒಟ್ಟು 300 ಮನೆಗಳನ್ನು ಕಟ್ಟಲಾಗಿದ್ದು, 300 ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.

ಈ) 1993ರ ಮಾರ್ಚ್ ತಿಂಗಳ ಅಂತ್ಯದಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಿಂದ ಹೂಳೆತ್ತುವ ಯಂತ್ರದ (ದ್ರಡ್ಜಿಂಗ್) ಖರೀದಿ

(2064): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರವು ಹೂಳೆತ್ತುವ ಯಂತ್ರವನ್ನು (ಡ್ರೆಡ್ಜಿಂಗ್ ಮೆಷಿನ್) ಕೊಂಡಿರುವುದೇ;

ಆ) ಯಾವ ಕಂಪನಿಯಿಂದ ಹಾಗೂ ಒಟ್ಟು ಅದರ ಮೌಲ್ಯವೆಷ್ಟು;

ಇ) ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಈ) ಈ ಯಂತ್ರವನ್ನು ಎಲ್ಲಿ ಅಳವಡಿಸಲಾಗಿದೆ ಹಾಗೂ ಯಾವಾಗ ಇದರ ಕೆಲಸವನ್ನು ಪ್ರಾರಂಭಿಸಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1992-93ನೇ ಸಾಲಿಗೆ ಮೀನುಗಾರಿಕೆ ಇಲಾಖಾವತಿಯಿಂದ ಹೂಳೆತ್ತುವ ಯಂತ್ರ ಖರೀದಿಗಾಗಿ ರೂ.132.50 ಲಕ್ಷಗಳನ್ನು ಮೀಸಲಿಡಲಾಗಿದೆ.